ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ.288/2018

ಸಿ.ಡಬ್ಲೂ:3 ಪಿ.ಡಬ್ಲೂ:3

ಸಾಕ್ಷಿಗೆ ದಿನಾಂಕ :-06/07/2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಜಹಾಂಗೀರ |
| ತಂ/ಗಂ. ಹೆಸರು | ನಬಿಸಾಬ ವಡ್ಡೋಡಗಿ |
| ವಯಸ್ಸು | 32 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ದೇವರ ಹಿಪ್ಪರಗಿ |

**ಮುಖ್ಯ ವಿಚಾರಣೆ : ಶ್ರೀ ಎಪಿಪಿ ಯವರಿಂದ**

ಪೋಲಿಸರು ನನಗೆ ಪಂಚನಾಮೆ ಮಾಡಲು ಕರೆಸಿದ್ದರು. ದಿನಾಂಕ 08-12-2017 ರಂದು ದೇವರ ಹಿಪ್ಪರಗಿ ಗ್ರಾಮದ ವಿಜಯಪೂರ ಹೋಗುವ ರಸ್ತೆಯ ಉರ್ದು ಪ್ರೌಢ ಶಾಲೆಯ ಮುಂದೆ ಅಪಘಾತವಾಗಿದ್ದು ನಾನು ಅಲ್ಲಿದ್ದಾಗ ಪೋಲಿಸರು ನನ್ನನ್ನು ಕರೆಯಿಸಿದ್ದರು. ಸದರಿ ಪಂಚನಾಮೆಯನ್ನು ಮದ್ಯಾಹ್ನ 3.30 ರಿಂದ 4.30 ಗಂಟೆಯವರೆಗೆ ಪಂಚನಾಮೆ ತಯಾರಿಸಿರುತ್ತಾರೆ. ಅಪಘಾತವನ್ನು ಸ್ಥಳ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆ ಬರೆದು ನಂತರ ನನ್ನ ಸಹಿ ಪಡೆದಿರುತ್ತಾರೆ. ನಂತರ ಅಲ್ಲಿಂದ ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಪೋಲಿಸ್ ಠಾಣೆಯಲ್ಲಿ ವಾಹನದ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಮಾಡಿ ಭಾವ ಚಿತ್ರವನ್ನು ತೆಗೆದಿರುತ್ತಾರೆ. ಆಗ ಸಮಯ ಸಂಜೆ 5.30 ರಿಂದ 6 ಗಂಟೆ ಆಗಿತ್ತು. ಪಂಚನಾಮೆ ಆಗುವ ಸಮಯದಲ್ಲಿ ನನ್ನ ಜೊತೆ ಚಾ ಸಾ 1 ಮತ್ತು 2 ರವರು ಇದ್ದರು. ಮೋಟಾರ್ ಸೈಕಲ್ ಎಚ್ ಎಫ್ ಡಿಲಕ್ಸ ಕೆಎ/28/ಟಿಸಿ/0026 ಅಂತಾ ಇತ್ತು. ಪಂಚನಾಮೆ ಮಾಡಿ ಸಹಿ ಪಡೆದಿರುತ್ತಾರೆ. ಪಂಚನಾಮೆ ನೋಡಿ ಗುರುತಿಸಿದ್ದು ಅದರ ಮೇಲೆ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದೆ. ತನ್ನ ಸಹಿ ನಿಪಿ 2 ಸಿ ಎಂದು ಗುರುತಿಸಲಾಯಿತು. ಜಪ್ತುಪಪಂಚನಾಮೆ ಈಗಾಗಲೇ ನಿಪಿ. 3 ಎಂದು ಗುರುತಿಸಲಾಗಿದೆ. ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 3 ಸಿ ಎಂದು ಗುರುತಿಸಲಾಯಿತು. ಸಾಕ್ಷಿ ಒಂದು ಭಾವ ಚಿತ್ರ ನೋಡಿ ತನ್ನ ಇರುವಿಕೆ ನೋಡಿ ಗುರುತಿಸಿದ್ದರಿಂದ ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಯಿತು. ಮತ್ತೊಂದು ಭಾವ ಚಿತ್ರವನ್ನು ಮೈದನದಲ್ಲಿ ತೆಗೆದಿರುತ್ತಾರೆ.

**ಪಾಟೀ ಸವಾಲು ಶ್ರೀ ಪಿ ಎಸ್ ಬಿ ವಕೀಲರಿಂದ**

ಪಂಚನಾಮೆಗೆ ಬರಲು ನನಗೆ ಯಾವುದೇ ನೋಟಿಸ್ ಜಾರಿ ಮಾಡಿಲ್ಲ. ಪಂಚನಾಮೆ ಜಾಗೆಯ ನೋಟಿಸ್ ನೀಡಿಲ್ಲ. ನಾನು ಪೋಲಿಸರು ಬಂದಾಗ ಉರ್ದು ಶಾಲೆಯ ಹತ್ತಿರ ಇದ್ದೆ. ಚಾ ಸಾ 2 ರವರು

ಕೂಡಾ ನನ್ನ ಜೊತೆ ಮಾತನಾಡುತ್ತಾ ಅಲ್ಲೆ ಕುಳಿತಿದ್ದ. ಪೋಲಿಸರು ಸ್ಥಳಕ್ಕೆ 3.30 ದಿಂದ 4.30 ಗಂಟೆ ಒಳಗಾಗಿ ಬಂದಿರುತ್ತಾರೆ. ನಂತರ ಅಲ್ಲಿಚಾ ಸಾ 1 ರವರು ಬಂದು ನಮ್ಮನ್ನು ಪಂಚರಾಗಲು ಬಂದು ಕರೆದುಕೊಂಡು ಹೋಗಿರುತ್ತ್ರಾನೆ. ಚಾ ಸಾ 1 ರವರು 3.30 ಕ್ಕೆ ಬಂದಿದ್ದ. ಆಗ ಚಾ ಸಾ 1 ರವರು ಮಾತ್ರ ಇದ್ದರು. ಪೋಲಿಸರು 3.30 ಗಂಟೆಗೆ ಬಂದಿರುತ್ತಾರೆ. ಪೋಲಿಸರು ಆ ದಿನ 2 ಭಾವ ಚಿತ್ರಗಳನ್ನು ತೆಗೆದಿರುತ್ತಾರೆ. ಒಂದು ಅಪಘಾತದ ಸ್ಥಳದಲ್ಲಿ ಮತ್ತೊಂದು ಠಾಣೆಯಲ್ಲಿ ತೆಗೆದಿರುತ್ತಾರೆ. ಪೋಲಿಸರು ಎರಡು ಭಾವ ಚಿತ್ರ ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳದ ಚೆಕ್ಕಬಂದಿ ಪೂರ್ವಕ್ಕೆ ಉರ್ದು ಶಾಲೆ, ದಕ್ಷಿಣಕ್ಕೆ ವಿಜಯಪೂರ ರಸ್ತೆ, ಉತ್ತರಕ್ಕೆ ಮೈದಾನ ಮತ್ತು ಪಶ್ಚಿಮಕ್ಕೆ ಪೆಟ್ರೋಲ್ ಪಂಪ ಇದೆ. ನನ್ನ ಸಮಕ್ಷಮ ಪಂಚನಾಮೆಯನ್ನು ಸಂಜೆ 4.30 ರಿಂದ 5.30 ರವರೆಗೆ ಮಾಡಿರುತ್ತಾರೆ. ಚಾ ಸಾ 1 ನನ್ನ ಗೆಳೆಯನ ಅಣ್ಣ. ಚಾ ಸಾ 1 ರವರು ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 2 ರಲ್ಲಿ ಬರೆದಿತ್ತು ಅದನ್ನು ನಾನು ಓದಿಲ್ಲ ಹಾಗೆ ಸಹಿ ಮಾಡಿರುತ್ತೇನೆ. ಪೋಲಿಸ್ ಠಾಣೆಗೆ 4.30 ಗಂಟೆಗೆ ಬಂದಿರುತ್ತೇವೆ. ಪೋಲಿಸ್ ಠಾಣೆಯಲ್ಲಿ 4.30 ರಿಂದ 5.30 ರವರೆಗೆ ಪಂಚನಾಮೆ ಮಾಡಿರುತ್ತಾರೆ. ಪೋಲಿಸ್ ಠಾಣೆಯಲ್ಲಿ ಬರೆದ ಪಂಚನಾಮೆ ಓದಿಲ್ಲ ಹಾಗೆ ಸಹಿ ಮಾಡಿರುತ್ತೇನೆ. ನನಗೆ ಯಾವುದೇ ರೀತಿಯ ಮಾಹಿತಿ ಇರದೇ ಇದ್ದರು ಕೂಡಾ ಚಾ ಸಾ 1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸ್ ಠಾಣೆಯಲ್ಲಿ ಮಾಡಿದ ಚೆಕ್ಕಬಂದಿ ಹೇಳಲು ನನಗೆ ಬರುವುದಿಲ್ಲ. ನನ್ನ ಸಮಕ್ಷಮ ಭಾವ ಚಿತ್ರ ತೆಗೆದಿದ್ದು ಹೊರತುಪಡಿಸಿ ಬೇರೆ ಯಾವುದೇ ಕೆಲಸ ಮಾಡಿಲ್ಲ.

ಮರು ವಿಚಾರಣೆ : ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ